

# सरयू ॐ ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363
January Vol. : 4 Issue : 8 5119/ಹೇಮಲಂಬಿ ಸಂವತ್ಸರ ಜನವರಿ 2018 ಪುಟ 8 Rs. 10/-

Postal Regn No. PTR/135/2016-18
Licensed to Post without pre-payment
License No: SK/WPP/PTR/177/2016-18

## ಜನಮನ ಸೂರೆಗೊಂಡ ಕ್ರೀಡೋತ್ಸವ 16.12.2017




ರಾಷ್ಟ್ರಮಟ್ಟದ ಅನೇಕ ದಿಗ್ಗಜರ ಸಮ್ಮುಖದಲ್ಲಿ ಹಲವಾರು ವೈಶಿಷ್ಟ್ಯಗಳೊಂದಿಗೆ ಈ ಬಾರಿಯ ಕ್ರೀಡೋತ್ಸವ ಸಂಪನ್ನಗೊಂಡಿತು. ಟಾಟಾ ಸಮೂಹ ಸಂಸ್ಥೆಗಳ ಮಾಜಿ ಅಧ್ಯಕ್ಷ ಶ್ರೀ ಸೈರಸ್ ಮಿಸ್ತ್ರಿ ಹಾಗೂ ರಾಷ್ಟ್ರೀಯ ಹೆದ್ದಾರಿ ಗೌರವ ಸಲಹೆಗಾರರಾದ ಶ್ರೀ ಆರ್.ಸಿ.ಸಿನ್ಹ ಮುಂತಾದ ಪ್ರಮುಖರು ಪಾಲ್ಗೊಂಡಿದ್ದರು.





ಕಾರ್ಯಕ್ರಮದ ಪ್ರಮುಖ ವೇದಿಕೆಯಲ್ಲಿ ಗಣ್ಯ ಮಾನ್ಯ ಅತಿಥಿಗಳು



ಕ್ರೀಡೋತ್ಸವದ ರಸದೌತಣವನ್ನು ಉಣಬಡಿಸಲು ಸಿದ್ಧಗೊಂಡ ಪ್ರತಿಭೆಗಳು

# ಶಿಶುಮಂದಿರ

**ಸೇವಾದಿನ ಆಚರಣೆ – ದಿ। ಅಜಿತ್ ಕುಮಾರ್‌ರವರ ಪುಣ್ಯ ಸ್ಮರಣೆಯ ನಿಮಿತ್ತ ಪ್ರತಿವರ್ಷ ಸೇವಾ ದಿನಾಚರಣೆಯನ್ನು ಶಿಶುಮಂದಿದ ವತಿಯಿಂದ ಹಮ್ಮಿಕೊಳ್ಳಲಾಗುತ್ತಿದ್ದು ಈ ಬಾರಿ ವಿವಿದೆಡೆ ನಡೆದ ಸೇವಾ ದಿನಾಚರಣೆಯ ವರದಿ ಇಂತಿದೆ.**



ಶ್ರೀರಾಮ ಶಿಶುಮಂದಿರ ಕಲ್ಲಡ್ಕದಲ್ಲಿ ಶ್ರೀಮತಿ ಸುಧಾ ಭಟ್ ಅಜಿತ್‌ಕುಮಾರರ ಜೀವನ ಸಾಧನೆ ಬಗ್ಗೆ ತಿಳಿಸಿದರು. ಒಟ್ಟು 148 ಪುಟಾಣಿಗಳು ಉಪಸ್ಥಿತರಿದ್ದರು.

**ಬಾಲಗೋಕುಲ ಮತ್ತು ಕಿಶೋರಭಾರತಿ**



ಬಾಲಗೋಕುಲ ಮತ್ತು ಕಿಶೋರಭಾರತಿಯಲ್ಲಿ ಭಜನಾ ಕಾರ್ಯಕ್ರಮ ನಡೆಸಲಾಯಿತು. ಬಾಲಗೋಕುಲದ 38 ಮಕ್ಕಳು ಕಿಶೋರ ಭಾರತಿಯ 35 ಮಕ್ಕಳು ಉಪಸ್ಥಿತರಿದ್ದರು. ಕಲ್ಲಡ್ಕ ಮಾತೃಮಂಡಳಿ ಹಾಗೂ ಪಾಲಕರು ಶ್ರಮದಾನ ಮಾಡಿದರು. ಕಾರ್ಯಕ್ರಮದ ಉದ್ದೇಶ ಮಹತ್ವವನ್ನು ಶ್ರೀಮತಿ ಪನಿಪಕ್ಕ, ಡಾ। ಕಮಲಾ ಭಟ್ ತಿಳಿಸಿದರು. ಒಟ್ಟು 33 ಪಾಲಕರು ಭಾಗವಹಿಸಿದ್ದರು.

**ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ**

ಸೇವಾದಿನದ ಪ್ರಯುಕ್ತ ಶಿಶುಮಂದಿರದಲ್ಲಿ ಪುಟಾಣಿಗಳಿಂದ ತುಳಸೀಗಿಡ ನೆಡಿಸಲಾಯಿತು. ಮತ್ತು ಪ್ರತಿ ಮಗುವಿನ ಮನೆಯಿಂದ 1ಕೆ.ಜಿ ಅಕ್ಕಿ ಮತ್ತು ತೆಂಗಿನಕಾಯಿ ಸಂಗ್ರಹಿಸಲಾಯಿತು. ಶ್ರೀಮತಿ ಪ್ರೀತಾ ಮಾತಾಜಿ ಅಜಿತ್‌ಕುಮಾರರ ಜೀವನದ ಬಗ್ಗೆ ಮಾತನಾಡಿದರು. ಶಿಶುಮಂದಿರದ ವತಿಯಿಂದ ನಡೆಯುವ ಬಾಲಗೋಕುಲ ಮತ್ತು ಪಾಲಕರಿಗೆ ಸೇವಾಬಸ್ತಿಯಲ್ಲಿ ಸ್ವಚ್ಛತಾ ಕಾರ್ಯಕ್ರಮ ಮತ್ತು 1 ಗಂಟೆಯ ಭಜನಾ ಕಾರ್ಯಕ್ರಮ ಮಾಡಲಾಯಿತು. ಶ್ರೀಮತಿ ಸುಧಾ ಸೇವಾದಿನದ ಮಹತ್ವ ತಿಳಿಸಿದರು. ಒಟ್ಟು 52 ಜನ ಭಾಗವಹಿಸಿದ್ದರು.

**ಕಶೆಕೋಡಿ ಮಾತೃಮಂಡಳಿ**



ಕಶೆಕೋಡಿ ಮಾತೃಮಂದಿರದ ವತಿಯಿಂದ ಕೊರಗ ಸಮುದಾಯದ ಅಂಧ ವೃದ್ಧೆಯ ಮನೆಗೆ ತೆರಳಿ ಅವರಿಗೆ ಹಣ್ಣು ಹಂಪಲು, ಉಡುವ ವಸ್ತ್ರ, ಬೈರಸು, ಹೊದಿಕೆ ವಸಗಳನ್ನು ಮಾತೃಮಂದಿರದ ಸದಸ್ಯೆಯರು ನೀಡಿ ಗೌರವಿಸಿದರು.

**ಶ್ರೀ ಕೃಷ್ಣ ಶಿಶುಮಂದಿರ ಸಜಿಪ ಕಂದೂರು**



ದೇರಳಕಟ್ಟೆ ಸೇವಾಶ್ರಮ ಆಶ್ರಮಕ್ಕೆ ಭೇಟಿ ನೀಡಿ ಅಲ್ಲಿನ ವೃದ್ಧರಿಗೆ 70ಕೆ.ಜಿ ಅಕ್ಕಿ 15 ತೆಂಗಿನಕಾಯಿ ಹಣ್ಣು ಹಂಪಲುಗಳನ್ನು ಮಕ್ಕಳಿಂದಲೇ ವಿತರಿಸಲಾಯಿತು. ಸೇವಾದಿನದ ಮಹತ್ವವನ್ನು ಶ್ರೀ ಲಕ್ಷ್ಮೀ ನಾರಾಯಣ ಭಟ್ ತಿಳಿಸಿದರು. ಪಾಲಕರು, ಆಡಳಿತ ಮಂಡಳಿ ಸದಸ್ಯರು ಮತ್ತು ಮಕ್ಕಳು ಸೇರಿ 60 ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಸಹಾಯ ಕೇಂದ್ರ ಉದ್ಘಾಟನೆ– 12/12/2017**



ಶ್ರೀರಾಮ ವಿದ್ಯಾಕೇಂದ್ರದ ವಠಾರದಲ್ಲಿ ಆರು ಜನ ಸದಸ್ಯೆಯರನ್ನೊಳಗೊಂಡ ಶ್ರೀರಾಮ ಸಹಾಯ ಕೇಂದ್ರವು ದಿನಾಂಕ 12–12–2017ರಂದು ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷರಾದ ಡಾ॥ ಪ್ರಭಾಕರ ಭಟ್‌ರವರು ದೀಪ ಬೆಳಗಿಸಿ ಉದ್ಘಾಟಿಸಿದರು. ಈ ಕೇಂದ್ರದಲ್ಲಿ ದಿನೋಪಯೋಗಿ ವಸ್ತುಗಳು ಹಾಗೂ ಖಾದ್ಯ ಸಾಮಾಗ್ರಿಗಳು ಮಾರಾಟಕ್ಕೆ ಲಭ್ಯವಿದೆ. ಶಾಲಾ ವಠಾರದಲ್ಲೇ ಈ ವ್ಯವಸ್ಥೆ ಲಭ್ಯವಿದ್ದು ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.

**ಶ್ರೀ ಅಕ್ಕಮಹಾದೇವಿ ಶಿಶುಮಂದಿರ**

ಬಾಲಗೋಕುಲದ ಮಕ್ಕಳು ಶಿಶುಮಂದಿರದ ಸುತ್ತಮುತ್ತ ಸ್ವಚ್ಛತೆ ಮಾಡಿದರು. ಸುರೇಶ್ ಪರ್ಕಳ ಇವರು ಅಜಿತ್ ಕುಮಾರ್‌ರ ಬಗ್ಗೆ ತಿಳಿಸಿಕೊಟ್ಟರು. ಒಟ್ಟು 20 ಮಕ್ಕಳು ಭಾಗವಹಿಸಿದ್ದರು.

**ಶ್ರೀ ಗಣೇಶ ಶಿಶುಮಂದಿರ ಬೊಂಡಾಲ**

ಮಾತೃಮಂಡಳಿ ಹಾಗೂ ಬಾಲಗೋಕುಲದ ಮಕ್ಕಳಿಂದ ಭಜನಾ ಕಾರ್ಯಕ್ರಮ ನಡೆಸಲಾಯಿತು. ಶ್ರೀಮತಿ ಲಕ್ಷ್ಮೀ ರಘುರಾಜ್ ಅವರು ಅಜಿತ್‌ಕುಮಾರ್‌ರ ಜೀವನದ ಬಗ್ಗೆ ತಿಳಿಸಿದರು. ಮಕ್ಕಳು, ಪಾಲಕರು ಸೇರಿ ಒಟ್ಟು 51 ಜನ ಭಾಗವಹಿಸಿದ್ದರು.

**ಕಾರ್ಯಾಗಾರ –29/12/2017**



ಶೈಕ್ಷಣಿಕ ವರ್ಷದ ಕೊನೆಯ ಕಾರ್ಯಗಾರವನ್ನು ಮಾಡಲಾಯಿತು. ಶಿಶು ಶಿಕ್ಷಣದ ಪ್ರಮುಖರಾದ ಭ। ಗಂಗಾ ಇವರು ಮಗುವಿನ ಬೆಳವಣಿಗೆಯ ಹಂತಗಳು ಪಂಚಭೂತ ಮತ್ತು ಪಂಚೇಂದ್ರಿಯಗಳ ನಡುವೆ ಇರುವ ಸಮನ್ವಯ ಸಂಗತಿಗಳನ್ನು ತಿಳಿಸಿಕೊಡುತ್ತಾ ಶಿಶುಮಂದಿರದಲ್ಲಿರುವ ಆಟಿಕೆಗಳ ಬಗ್ಗೆ ಮಾಹಿತಿ ನೀಡಿ ಮಗುವನ್ನು ಅರ್ಥಮಾಡಿಕೊಳ್ಳುವುದು ಹೇಗೆ ಎಂಬುವುದನ್ನು ವಿವರಿಸಿದರು. ಒಟ್ಟು 30 ಪಾಲಕರು ಭಾಗವಹಿಸಿದ್ದರು.

**ಗೋಕುಲೋತ್ಸವ** 24/12/2017

ವಿಟ್ಲತಾಲೂಕಿನ ಗೋಕುಲೋತ್ಸವ ಕಾರ್ಯಕ್ರಮ ಶ್ರೀರಾಮ ವಿದ್ಯಾಕೇಂದ್ರದಲ್ಲಿ ನಡೆಯಿತು. 24 ಬಾಲಗೋಕುಲಗಳಿಂದ 327 ಮಕ್ಕಳು ಭಾಗವಹಿಸಿದ್ದರು. ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಿಂದ ನಡೆಯುವ 11 ಬಾಲಗೋಕುಲಗಳಿಂದ 144 ಮಕ್ಕಳು ಭಾಗವಹಿಸಿದ್ದರು. ಬರಿಮಾರು ಬಾಲಗೋಕುಲಕ್ಕೆ ಗೋಕುಲ ತಿಲಕ ಮತ್ತು ಸರಸ್ವತಿ ಶಿಶುಮಂದಿರ ಕೊಪ್ಪಲಕೊಡಿ ಬಾಲಗೋಕುಲಕ್ಕೆ ಗೋಕುಲ ಸಾಮ್ರಾಟ್ ಪ್ರಶಸ್ತಿ ದೊರೆಯಿತು.

ದಿ: 25/12/2017 ರಂದು ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಇಲ್ಲಿಯ ಮೈದಾನದಲ್ಲಿ ಬಂಟ್ವಾಳ ತಾಲೂಕಿನ ಗೋಕುಲೋತ್ಸವ ನಡೆಸಲಾಯಿತು. 28 ಬಾಲಗೊಕುಲಗಳಿಂದ ಮಕ್ಕಳು ಭಾಗವಹಿಸಿದ್ದರು. ಬಾಲಗೋಕುಲ ಮಕ್ಕಳು, ಪಾಲಕರು, ಮಾತಾಜಿಗಳು ಒಟ್ಟು ಸೇರಿ 1200 ಮಂದಿ ಭಾಗವಹಿಸಿದ್ದರು.

## ಪ್ರಾಥಮಿಕ

**ಅಧ್ಯಯನ ಪ್ರವಾಸ**



ದಿನಾಂಕ 29-12-2017 ರಂದು 6 , 7 ನೇ ತರಗತಿಯ 190 ವಿದ್ಯಾರ್ಥಿಗಳು ಮತ್ತು 10 ಶಿಕ್ಷಕರು ಎ.ಎಮ್.ಆರ್. ಪವರ್ ಪ್ರೈವೆಟ್ ಲಿಮಿಟೆಡ್ ಶಂಭೂರಿಗೆ ಅಧ್ಯಯನ ಪ್ರವಾಸ ಕೈಗೊಂಡಿತ್ತು

**ಜಗದೀಶ್‌ಚಂದ್ರ ಬೋಸ್ ಜನ್ಮ ದಿನಾಚರಣೆ 1.12.17**

ಮಕ್ಕಳ ವಿಜ್ಞಾನ ಸಂಘದ ವತಿಯಿಂದ ಆಚರಿಸಲಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಯಾದ ಆದಿತ್ಯಕೃಷ್ಣ ಜಗದೀಶ್ ಚಂದ್ರ ಬೋಸ್‌ರ ಮಹತ್ವವನ್ನು ತಿಳಿಸಿದನು. ಅಧ್ಯಾಪಕರಾದ ಗೋಪಾಲ ಶ್ರೀಮಾನ್ ಜಗದೀಶ್ ಚಂದ್ರ ಬೋಸ್‌ರು ವಿಜ್ಞಾನಕ್ಕೆ ನೀಡಿದ ಕೊಡುಗೆಗಳನ್ನು ಮಕ್ಕಳಿಗೆ ತಿಳಿಸಿದರು.

**ರಾಷ್ಟ್ರಮಟ್ಟದ ಕರಾಟೆ ಚಾಂಪಿಯನ್ ಶಿಪ್ -2017**




ನಂದಿನಿ ಸಭಾ ಭವನ ಹಂಪನಕಟ್ಟೆ ಮಂಗಳೂರು ಇಲ್ಲಿ ದಿನಾಂಕ 2/12/2017 ಮತ್ತು 3/12/2017 ರಂದು ನಡೆದಿದ್ದು. ಇದರಲ್ಲಿ ಶ್ರೀರಾಮ ಪ್ರಾಥಮಿಕ ಶಾಲೆ ಹನುಮಾನ್ ನಗರ ಕಲ್ಲಡ್ಕ ಇಲ್ಲಿನ 8 ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವೈಯಕ್ತಿಕ ವಿಭಾಗದ ಕಟಾದಲ್ಲಿ ಮಿಥುನ್ ರಾಜ್ , ಚಂದ್ರಧರ, ಶರಣ್ಯಶ್ರೀ ಪ್ರಥಮ ಹಾಗೂ ಶರಣ್ಯ ಶ್ರೀ ಕುಮಿಟೆ ವಿಭಾಗದಲ್ಲಿ ದ್ವಿತಿಯ ಸ್ಥಾನ , ಕಿಶನ್ ಕಟಾ ವಿಭಾಗದಲ್ಲಿ ಪ್ರಥಮ ಹಾಗೂ ಕುಮಿಟೆ ವಿಭಾಗಲ್ಲಿ ದ್ವಿತೀಯ, ಗುರುಪ್ರಸಾದ್ ಕಟಾದಲ್ಲಿ ದ್ವಿತಿಯ, ಮನೀಶ್ ಯು ಎಸ್ , ಮನ್ವಿತ್ , ಚಂದನ್ ಕಟಾದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಪ್ರಥಮ ಸ್ಥಾನದ 3 ಚಿನ್ನ ದ್ವಿತಿಯ ಸ್ಥಾನದ 4 ಬೆಳ್ಳಿ ತೃತೀಯ ಸ್ಥಾನದ 3 ಕಂಚಿನ ಪದಕಗಳನ್ನು ವಿದ್ಯಾರ್ಥಿಗಳು ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.

**ಕುವೆಂಪುರವರ ಜನ್ಮದಿನಾಚರಣೆ 30-12-2017**



ರಾಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀಮತಿ ಜಯಲಕ್ಮಿ, ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ರಾಷ್ಟ್ರಕವಿ ಕುವೆಂಪುರವರ ಜೀವನ ಆದರ್ಶಗಳ ಬಗ್ಗೆ ಕು.ಮೀನಾಕ್ಷಿ ಮಾತಾಜಿ ತಿಳಿಸಿಕೊಟ್ಟರು. ಕು.ಆದಿಶ್ರೀ ಕುವೆಂಪು ರಚಿತ ಭಾವಗೀತೆ ಹಾಡಿದರು. ಜೊತೆಗೆ ಗೂಡುದೀಪ ರಚನಾ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

**ಪ್ರತಿಭಾ ಪುರಸ್ಕಾರ:**




2017-18 ನೇ ಶೈಕ್ಷಣಿಕ ವರ್ಷದಲ್ಲಿ ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿ ಕ್ರೀಡೆ ಮತ್ತು ಬೌದ್ಧಿಕ ಬಹುಮಾನ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಪ್ರತಿಭಾ ಪುರಸ್ಕಾರದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರಗತಿಪರ ಕೃಷಿಕ ಶ್ರೀ ಸದಾನಂದ ನಾವರ, ದ.ಕ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಮೀನಾಕ್ಷಿ ಶಾಂತಿಗೋಡು ಉಪಸ್ಥಿತರಿದ್ದರು. ವೇದಿಕೆಯಲ್ಲಿ, ಸಂಸ್ಥೆಯ ಹಿರಿಯರು, ಹಾಗೂ ಮತ್ತಿತರರು ಜೊತೆಗಿದ್ದರು. ಈ ಶೈಕ್ಷಣಿಕ ವರ್ಷದಲ್ಲಿ ನಡೆದ ವಿವಿಧ ಶಾರೀರಿಕ ಬೌದ್ಧಿಕ ಸ್ಪರ್ಧೆಗಳ ವಿಜೇತರನ್ನು ಅಭಿನಂದಿಸಲಾಯಿತು.

## ಪ್ರೌಢಶಾಲೆ

**ಅತಿಥಿಗಳ ಭೇಟಿ : 05.12.2017**



ಡಾ। ಜಿ.ಜಿ.ಹೆಗ್ಡೆ, ಸ್ತ್ರೀರೋಗ ತಜ್ಞರು ಕೆನರಾ ಹೆಲ್ತ್ ಕೇರ್ ಸೆಂಟರ್ ಕುಮಟಾ, ಶ್ರೀ ಗಿರೀಶ್ ಭಟ್, ಕುಮಟಾ, ಶ್ರೀ ದತ್ತಾತ್ರೇಯ ನಾಯಕ್, ಉಪನ್ಯಾಸಕರು ಶ್ರೀ ಗೋಕರ್ಣನಾಥೇಶ್ವರ ಬಿ.ಎಡ್ ಕಾಲೇಜ್ ಮಂಗಳೂರು ಉಪಸ್ಥಿತರಿದ್ದರು.

**"ವಿಶ್ವ ವಿಶೇಷ ಚೇತನರ ದಿನಾಚರಣೆ-2017-18"**

ಇದರ ಅಂಗವಾಗಿ ದಿನಾಂಕ 04.12.2017ರಂದು ಲಯನ್ಸ್ ಸೇವಾ ಮಂದಿರ ಬಿ.ಸಿ.ರೋಡ್ ಇಲ್ಲಿ ಜರಗಿದ ವಿಶೇಷ ಚೇತನ ಮಕ್ಕಳ ಸ್ಪರ್ಧೆಯಲ್ಲಿ 17 ವಿದ್ಯಾರ್ಥಿಗಳು ಭಾಗವಹಿಸಿದ್ದು, ವಿದ್ಯಾರ್ಥಿಗಳು ಬಹುಮಾನವನ್ನು ಪಡೆದಿದ್ದಾರೆ. ಚಿತ್ರಕಲೆ (ಪ್ರಾಥಮಿಕ ವಿಭಾಗ)-ವೈಭವಿ ನಾಯಕ್(8 ಕಣ್ಣಗಿ) ಪ್ರಥಮ, ಆಶುಭಾಷಣ ವೈಭವಿ ನಾಯಕ್(8 ಕಣ್ಣಗಿ) ದ್ವಿತೀಯ, ಅಂಕಿತಾ ಅಂಚನ್(8ನಚಿಕೇತ) ತೃತೀಯ, ಚಿತ್ರಕಲೆ ನಿಶಾಂತ್ (10 ದುರ್ಗಾವತಿ) ಪ್ರಥಮ ಬಹುಮಾನ ಪಡೆದಿದ್ದಾರೆ.

**ಅತಿಥಿಗಳ ಭೇಟಿ**




ಸರಸ್ವತಿ ವಂದನಾ ಸಭಾದಲ್ಲಿ ಶ್ರೀಮತಿ ಆಶಾ ಕೆ.ಪಿ ಶಿರಸ್ತೇದಾರರು ಬಂಟ್ವಾಳ ಸಿವಿಲ್ ಕೋರ್ಟ್, ಶ್ರೀ ನಾರಾಯಣ ಸಿ ಅಕೌಂಟ್ ಶಿರಸ್ತೇದಾರರು ಬಂಟ್ವಾಳ ಸಿವಿಲ್ ಕೋರ್ಟ್, ಶ್ರೀ ಸತೀಶ ಭಟ್ ಶಿವಗಿರಿ ಕೋಶಾಧಿಕಾರಿ ಶ್ರೀರಾಮ ವಿದ್ಯಾ-ಕೇಂದ್ರ, ಶ್ರೀ ಕೇಶವ ಆಚಾರ್ಯ ಹಿರಿಯ ಶಿಕ್ಷಕರು ಉಪಸ್ಥಿತರಿದ್ದರು.

**ಬಿ.ಎಡ್. ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ**




ಶ್ರೀ ಗೋಕರ್ಣನಾಥೇಶ್ವರ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ ಮಂಗಳೂರು ಇಲ್ಲಿನ ವಿದ್ಯಾರ್ಥಿಗಳು ಕಳೆದೆರಡು ತಿಂಗಳುಗಳಿಂದ ಸದ್ರಿ ಸಂಸ್ಥೆಯಲ್ಲಿ ಬೋಧನಾ ತರಬೇತಿ ಪಡೆದು ತೆರಳುವ ಸಂದರ್ಭದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಕೊನೆಯ ದಿನದಂದು ಬೀಳ್ಕೊಡುಗೆಯ ಸಂದರ್ಭದಲ್ಲಿ ಸಂಸ್ಥೆಯ ಹಿರಿಯರಿಗೆ ನೆನಪಿನ ಕಾಣಿಕೆಯನ್ನು ಹಸ್ತಾಂತರಿಸಿ ಅನಿಸಿಕೆಗಳನ್ನು ಹಂಚಿಕೊಂಡರು. ಸಂಸ್ಥೆಯ ಹಿರಿಯರು ಉಪಸ್ಥಿತರಿದ್ದರು.

# ಕಣ್ಮನ ಸೆಳೆದ ಕ್ರೀಡೋತ್ಸವದ ವಿವಿಧ ದೃಶ್ಯಾವಳಿಗಳು



ಕಾಲೇಜು ಪಥಸಂಚಲನ – ವಿಶೇಷ ಪ್ರದರ್ಶನ





ಶಿಶುಮಂದಿರದ ಪುಟಾಣಿಗಳ ಶಿಶುನೃತ್ಯದ ವಿವಿಧ ರಚನೆಗಳು





ಪ್ರೌಢಶಾಲಾ ವಿಭಾಗದ ಘೋಷ್ ಪ್ರದರ್ಶನದಲ್ಲಿ ಮೂಡಿಬಂದ ಚಲಿಸುವ ರಚನೆಗಳು



ಘೋಷ್ ಪ್ರದರ್ಶನದಲ್ಲಿ ಟಿಕ್ ಟಿಕ್ ರಚನೆಗಳು








ಪ್ರಾಥಮಿಕ ಶಾಲಾ ವಿಭಾಗದ ಜಡೆಕೋಲಾಟದಲ್ಲಿ ರೂಪುಗೊಂಡ ವೈವಿಧ್ಯಮಯ ಆಕೃತಿಗಳು





ಸಾಮೂಹಿಕ ನಿಯುದ್ಧ ಮತ್ತು ವೈಯಕಿಕ ಸಾಹಸಿಕ ಪ್ರದರ್ಶನಗಳು



ಯೋಗಾಸನ–ಯೋಗಗುಚ್ಛ








ಪ್ರಾಥಮಿಕ ಶಾಲಾ ನೃತ್ಯದಲ್ಲಿ ಅರಳಿದ ಕಮಲ, ಮೊಳಗಿದ ಪ್ರಣವ ಹಾಗೂ ಸಾವಿರದ ಸಂಭ್ರಮ ಸಾರುವ 1061 ದಾಖಲಾತಿಯ ನೆನಪಿನ ನೋಟ

# 120ನಿಮಿಷಗಳು, 18 ವಿವಿಧ ಪ್ರದರ್ಶನಗಳು 10ರಿಂದ 15ಸಾವಿರ ಪ್ರೇಕ್ಷಕರು....





ಪ್ರೌಢ ಶಾಲಾ ವಿದ್ಯಾರ್ಥಿನಿಯರ ದೀಪಾರತಿಯಲ್ಲಿ ಭಗವಾ ಮತ್ತು ಸ್ವಸ್ತಿಕ





ನೃತ್ಯ ಭಜನೆ



ಜೋಡಿ ಮಲ್ಲಕಂಬ ಮತ್ತು ತಿರುಗುವ ಮಲ್ಲಕಂಬದಲ್ಲಿ ವಿವಿಧ ಸಾಮೂಹಿಕ ಸಾಹಸಗಳು




ಕಾಲೇಜು ವಿದ್ಯಾರ್ಥಿನಿಯರ ನೃತ್ಯ, ಕೃಷಿ ಚಟುವಟಿಕೆ ಮತ್ತು ಬಿಸಿಊಟ ರದ್ದತಿಯ ಅಣಕು ಪ್ರದರ್ಶನ



ಕೇರಳದ ಚೆಂಡೆ – ಚಕ್ರತಾಳ






ಅಂಜುವೆದೆ ನಮದಲ್ಲ ಎಂಬ ಸಂದೇಶ ಸಾರಿದ ವೈವಿಧ್ಯಮಯ ಸಾಹಸ ಪ್ರದರ್ಶನಗಳು (ಪೋಲಿಯೋಪೀಡಿತ ವಿದ್ಯಾರ್ಥಿಯೂ ಪ್ರದರ್ಶನ ನೀಡಿದ್ದು ವಿಶೇಷವಾಗಿತ್ತು)



ಬೆಂಕಿ ಸಾಹಸ




ಸ್ಕೇಟಿಂಗ್ ಪ್ರದರ್ಶನದಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು

### 'ಸಿದ್ಧಾಂತ' ತಾಲೂಕು ಮಟ್ಟದ ರಸಪ್ರಶ್ನೆ



14.12.2017ರಂದು ಎಸ್.ವಿ.ಎಸ್ ಕಾಲೇಜು ಬಂಟ್ವಾಳದ ವಾಣಿಜ್ಯ ವಿಭಾಗದವರು ನಡೆಸಿದ 'ಸಿದ್ಧಾಂತ' ತಾಲೂಕು ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಶ್ರೀರಾಮ ಪ್ರೌಢಶಾಲೆಯ 10ನೇ ತರಗತಿಯ ವಿದ್ಯಾರ್ಥಿಗಳಾದ ಪರೀಕ್ಷಿತ್ ಎನ್ ಮತ್ತು ಲಿಖಿತ್‌ರಾಜ್ ಎಂ ಜಿ ಇವರು ಪ್ರಥಮ ಬಹುಮಾನ ಪಡೆದಿರುತ್ತಾರೆ.

**ಪ್ರಥಮ ಸ್ಥಾನದ ಬಹುಮಾನವಾಗಿ ದೊರೆತ ನಗದು ಮೊತ್ತವನ್ನು ಸಂಸ್ಥೆಯ ಬಿಕ್ಷಾಂದೇಹಿ ಅಭಿಯಾನಕ್ಕೆ ವಿಜೇತ ವಿದ್ಯಾರ್ಥಿಗಳು ನೀಡಿರುತ್ತಾರೆ.**

### 10 ನೇ ತರಗತಿ ಮಾಹಿತಿ ಕಾರ್ಯಾಗಾರ 18.12.2017



MITE ಮಂಗಳೂರಿನ ಪ್ರಾಂಶುಪಾಲರಾದ ಶ್ರೀ ರಾಕೇಶ್ ಹಾಗೂ ಉಪಪ್ರಾಂಶುಪಾಲೆಯಾದ ಶ್ರೀಮತಿ ನಿಶ್ಮಿತಾ ರಾಕೇಶ್ ಇವರು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರ ನಡೆಸಿಕೊಟ್ಟರು

### ದಕ್ಷಿಣ ಕನ್ನಡ ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಕಾರ್ಯಕ್ರಮದಲ್ಲಿ ಬಹುಮಾನ

ಜಿಲ್ಲಾ ಗ್ರಾಹಕ ಸಂಘಟನೆಗಳ ಒಕ್ಕೂಟ ದಕ್ಷಿಣಕನ್ನಡ ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಮಂಗಳೂರು ಇದರ ವತಿಯಿಂದ ದಿನಾಂಕ 12.12.2017ರಂದು ವಿಠಲ ಪದವಿ ಪೂರ್ವ ಕಾಲೇಜು ವಿಟ್ಲ ಇಲ್ಲಿ ನಡೆದ ವಿವಿಧ ಸ್ಪರ್ಧೆಗಳಲ್ಲಿ 12 ವಿದ್ಯಾರ್ಥಿಗಳು ಭಾಗವಹಿಸಿದ್ದು, ವೀಕ್ಷಿತಾ 10 ಚೈವನ ತೃತೀಯ ಸ್ಥಾನ ಹಾಗೂ ಮೇದಿನಿ(10 ಆಜಾದ್) ತೃತೀಯ ಸ್ಥಾನವನ್ನು ಗಳಿಸಿರುತ್ತಾರೆ.

### ಪ್ರತಿಭಾ ಪುರಸ್ಕಾರ : 23.12.2017

ಶಾರೀರಿಕ ಬೌದ್ಧಿಕ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ಈ ಕಾರ್ಯಕ್ರಮದಲ್ಲಿ ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿ ಪ್ರಸ್ತುತ ಅಮೇರಿಕಾದ ಚಿಕಾಗೊದಲ್ಲಿ ಇಂಜಿನಿಯರ್ ಆಗಿರುವ




ಶ್ರೀ ಹರೀಶ್ ದಂಪತಿಗಳು ಮತ್ತು ಶ್ರೀ ಬಸವರಾಜ ಡಿಗ್ಗಾವಿ ಶ್ರೀ ಗುರುಪೀಠ ಕಲ್ಬುರ್ಗಿಯ ಅಧ್ಯಕ್ಷರು, ಶ್ರೀಮತಿ ನಾಗರತ್ನ ಬಸವರಾಜ ಡಿಗ್ಗಾವಿ, ಶ್ರೀ ಆನಂದ ರಾಜ್ಯ ಸಾವಯವ ಕೃಷಿ ಮಿಶನ್‌ನ ಸಂಚಾಲಕರು, ಡಾ। ಜಗದೀಶ ಭಟ್ ವೈದ್ಯರು ಯೆನಪೋಯ ಆಸ್ಪತ್ರೆ ಮಂಗಳೂರು, ಹಾಗೂ ವಿದ್ಯಾಕೇಂದ್ರದ ಹಿರಿಯರು ಉಪಸ್ಥಿತರಿದ್ದರು.

### ರಾಷ್ಟ್ರಮಟ್ಟದ ಕರಾಟೆ ಚಾಂಪಿಯನ್‌ಶಿಪ್



ನಂದಿನಿ ಸಭಾಭವನ ಹಂಪನಕಟ್ಟೆ ಮಂಗಳೂರು ಇಲ್ಲಿ ಡಿಸೆಂಬರ್ 2 ಹಾಗೂ 3ರಂದು ನಡೆದ ರಾಷ್ಟ್ರಮಟ್ಟದ ಕರಾಟೆ ಚಾಂಪಿಯನ್‌ಶಿಪ್ 2017ನಲ್ಲಿ ಪ್ರೌಢಶಾಲೆಯ 10 ಮಂದಿ ವಿದ್ಯಾರ್ಥಿಗಳು ಭಾಗವಹಿಸಿ ಪ್ರಥಮ ಸ್ಥಾನದಿಂದ 6 ಚಿನ್ನ, ದ್ವಿತೀಯ ಸ್ಥಾನದಿಂದ 5 ಬೆಳ್ಳಿ, ತೃತೀಯ ಸ್ಥಾನದಿಂದ 3 ಬೆಳ್ಳಿ ಪದಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.

### ಅಂತರಾಷ್ಟ್ರೀಯ ಮಟ್ಟದ ಕರಾಟೆ ಚಾಂಪಿಯನ್



ದಿನಾಂಕ:09.12.2017ರಂದು ತಮಿಳುನಾಡಿನಲ್ಲಿ ನಡೆದ ಅಂತರಾಷ್ಟ್ರೀಯ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ಕಮಿಟೆ ವಿಭಾಗದಲ್ಲಿ ದಿನಕರ(8 ಪ್ರಹ್ಲಾದ), ಏಳನೆಯ ತರಗತಿ ವಿದ್ಯಾರ್ಥಿಗಳಾದ ಗುರುಪ್ರಸಾದ್, ಮಿಥುನ್‌ರಾಜ್ ಹಾಗೂ ಐದನೆಯ ತರಗತಿಯ ಕಿಶನ್ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕವನ್ನು ಪಡೆದು-ಕೊಂಡಿರುತ್ತಾರೆ.

### ಕ್ರೀಡಾಸಾಧನೆ



ದಿನಾಂಕ:11.12.2017 ಮತ್ತು 12.12.2017ರಂದು ಮಂಗಳಾ ಕ್ರೀಡಾಂಗಣ ಮಂಗಳೂರಿನಲ್ಲಿ ನಡೆದ ದ.ಕ., ಉಡುಪಿ ಮತ್ತು ಶ್ರೀಲಂಕಾ ಕಿರಿಯರ ಕ್ರೀಡಾಕೂಟದಲ್ಲಿ 16 ವರ್ಷದೊಳಗಿನ ಬಾಲಕರ ವಿಭಾಗದ ಈಟಿ ಎಸೆತದಲ್ಲಿ 9ನೇ ತರಗತಿಯ ಎಂಕಿ ಪ್ರಥಮ ಸ್ಥಾನ ಹಾಗೂ 14 ವರ್ಷದೊಳಗಿನ ಬಾಲಕರ ವಿಭಾಗದ 600ಮೀ ಓಟದಲ್ಲಿ ವರುಣ್ 9ನೇ ತರಗತಿಯ ವರುಣ್ ತೃತೀಯ ಸ್ಥಾನ ಪಡೆದಿರುತ್ತಾರೆ.

### ಕಬಡ್ಡಿ



ದಕ್ಷಿಣಕನ್ನಡ ಜಿಲ್ಲೆಯ ಪ್ರೌಢಶಾಲಾ ವಿಭಾಗಕ್ಕೆ ಸ್ವಸ್ತಿಕ್ ಫ್ರೆಂಡ್ಸ್ ಪೂಂಜಾಲಕಟ್ಟೆಯು ಪ್ರೋಕಬಡ್ಡಿಯನ್ನು ಆಯೋಜಿಸಿದ್ದು ನಮ್ಮ ಶಾಲೆಯ ತಂಡವು ಚತುರ್ಥ ಪ್ರಶಸ್ತಿಯನ್ನು ಗಳಿಸಿದೆ.

### ಕಬಡ್ಡಿ



8ನೇ ತರಗತಿಯ ನಿಖಿಲ್ ಬಿ. 14 ವರ್ಷದೊಳಗಿನ ಬಾಲಕರ ಕಬಡ್ಡಿಗೆ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದು ವಿಭಾಗಮಟ್ಟದ ಕಬಡ್ಡಿಯು ಚಿಕ್ಕಮಗಳೂರು ಜಿಲ್ಲೆಯ ಕಡೂರಿನಲ್ಲಿ ನಡೆದಿರುತ್ತದೆ. ರಾಜ್ಯಮಟ್ಟದ ಕಬಡ್ಡಿಯು ಬಳ್ಳಾರಿ ಜಿಲ್ಲೆಯ VNU ಶಾಲೆಯಲ್ಲಿ ನಡೆದು ರಾಷ್ಟ್ರಮಟ್ಟದ ಕಬಡ್ಡಿಯು ಛತ್ತೀಸ್‌ಗಢದಲ್ಲಿ ನಡೆಯುವ ತಂಡಕ್ಕೆ ಆಯ್ಕೆಯಾಗಿದ್ದಾನೆ.

## ಪದವಿ ಪೂರ್ವ

**ರಾಷ್ಟ್ರೀಯ ಮಟ್ಟದ ಜ್ಞಾನ-ವಿಜ್ಞಾನ ಮೇಳ**




17/12/17 ರಿಂದ 22/12/17 ರವರೆಗೆ ರಾಷ್ಟ್ರೋತ್ಥಾನ ವಿದ್ಯಾಕೇದ್ರ ಥಣಿಸಂದ್ರ, ಬೆಂಗಳೂರಿನಲ್ಲಿ ನಡೆದ ಮೇಳದಲ್ಲಿ ರಸಾಯನಶಾಸ್ತ್ರ ಪ್ರಯೋಗ ಸ್ಪರ್ಧೆಯಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ಮಾನಸ ಇವರು ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

**"ಗೋವು ಮೇವು"** 20/12/17



"ಗೋವು ಮೇವು ನಾವು" ಕಾರ್ಯಕ್ರಮದಡಿ ಪದವಿ ಪೂರ್ವ ವಿದ್ಯಾರ್ಥಿಗಳಿಂದ ಮೇವು ಸಂಗ್ರಹ.

**ಅಖಿಲ ಭಾರತ ಬಾಲಿಕಾ ಶಿಕ್ಷಣ ಪ್ರಮುಖರ ಭೇಟಿ**




21/12/17 ವಿದ್ಯಾರ್ಥಿನಿಯರಿಗಾಗಿ ನಡೆದ ಬಾಲಿಕ ಶಿಕ್ಷಣದಲ್ಲಿ ಶ್ರೀಮತಿ ತಾರಾತಾಯಿ, ಅಖಿಲ ಭಾರತೀಯ ಬಾಲಿಕ ಶಿಕ್ಷಾ ಪ್ರಮುಖ್ ಮಕ್ಕಳನ್ನುದ್ದೇಶಿಸಿ ಮಾತನಾಡಿದರು.

* 25/12/17 ರಂದು ಲಯನ್ಸ್ ಕ್ಲಬ್ ಬಿ.ಸಿ.ರೋಡ್‌ನಲ್ಲಿ ನಡೆದ 'ರಾರಾ ಸಂಭ್ರಮ'ದಲ್ಲಿ ಕುಮಾರಿ ಪವಿತ್ರ ಮೆಹಂದಿ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

ದಿನಾಂಕ 29/12/17 ರಂದು ಡಿಸೆಂಬರ್ ತಿಂಗಳ ಭಜನೆಯನ್ನು ದ್ವಿತೀಯ ಕಲಾ ವಿಭಾಗದ ವಿದ್ಯಾರ್ಥಿಗಳು ನಡೆಸಿಕೊಟ್ಟರು. ಡಿಸೆಂಬರ್ ತಿಂಗಳಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡ ವಿದ್ಯಾರ್ಥಿಗಳೂ ಶ್ರದ್ಧಾನಿಧಿಯನ್ನು ಅರ್ಪಿಸಿದರು.

**'ಪ್ರತಿಭಾ ಪುರಸ್ಕಾರ'** 30-12-2017




ಈ ಶೈಕ್ಷಣಿಕ ಸಾಲಿನ 'ಪ್ರತಿಭಾ ಪುರಸ್ಕಾರ'ದಲ್ಲಿ ಡಾ. ಪ್ರಭಾಕರ್ ಭಟ್, ಕಲ್ಲಡ್ಕ, ಎಮ್.ಆರ್.ಪಿ.ಎಲ್ ಮ್ಯಾನೇಜ್‌ಮೆಂಟ್, ಸ್ಟಾಫ್ ಎಸೋಶಿಯೇಶನ್‌ನ ಅಧ್ಯಕ್ಷ ಶ್ರೀ ಸೀತಾರಾಮ ರೈ ಕೈಕಾರ, ಹಾಗೂ ವಿದ್ಯಾಸಂಸ್ಥೆಯ ಹಿರಿಯರು ಭಾಗವಹಿಸಿ ಸ್ಪರ್ಧಾ ವಿಜೇತರಿಗೆ ಬಹುಮಾನ ನೀಡಿದರು.

## ಪದವಿ

**ಪ್ರತಿಭಾ ದಿನೋತ್ಸವದ ಪ್ರಯುಕ್ತ ವಿವಿಧ ಸ್ಪರ್ಧೆಗಳು**

ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಒಟ್ಟು 20 ಸ್ಪರ್ಧೆಗಳನ್ನು ಆಯೋಜಿಸಿಲಾಯಿತು. ಭಾವಗೀತೆ, ಏಕಪಾತ್ರಭಿನಯ, ಪದಬಂಧ, ಕನ್ನಡ ಭಾಷಣ, ಸ್ಪೋಟ್ ಡ್ಯಾನ್ಸ್, ಕ್ವಿಝ್ ಕಂಡಕ್ಟ್, ಫೋಟೋಗ್ರಫಿ, ಕಲಾಕೃತಿ,ಪೋಸ್ಟರ್ ಮೇಕಿಂಗ್, ಸ್ಪೋಟ್ ಪೈಟಿಂಗ್, ಬೆಂಕಿ ಇಲ್ಲದ ಅಡುಗೆ, ಇಂಗ್ಲೀಷ್ ಭಾಷಣ, ಕಗ್ಗ-ದೋಹಾ ಪಠಣ, ಟ್ಯಾಬ್ಲೋ, ಇಂಗ್ಲೀಷ್ ಪ್ರಬಂಧ, ಕನ್ನಡ ಪ್ರಬಂಧ, ಸಂಸ್ಕೃತ ಪ್ರಬಂಧ ಏರ್ಪಡಿಸಲಾಯಿತು.

**ಅಂತರ್ ಕಾಲೇಜು ಗ್ರಾಮೀಣ ಕ್ರೀಡಾ ಸ್ಪರ್ಧೆ**

09-12-2017 ಸವಣೂರು ವಿದ್ಯಾರಶ್ಮಿ ಕಾಲೇಜಿನಲ್ಲಿ ನಡೆದ ಗ್ರಾಮೀಣ ಕ್ರೀಡೆಯಲ್ಲಿ ಒಟ್ಟು 24 ವಿದ್ಯಾರ್ಥಿಗಳು ಭಾಗವಹಿಸಿ ಹುಡುಗರ ವಿಭಾಗದಲ್ಲಿ ಸಮಗ್ರ ಪ್ರಶಸ್ತಿಯನ್ನು ಪಡೆದಿರುತ್ತಾರೆ.

**ವಾರ್ಷಿಕ ಕ್ರೀಡಾಕೂಟ: 23-12-2017**



2017-18ನೇ ಸಾಲಿನ ಪ್ರತಾಪ ಕ್ರೀಡಾ ಸಂಘದ ವಾರ್ಷಿಕ ಕ್ರೀಡಾಕೂಟವನ್ನು ವಿಠಲ ಪ.ಪೂ. ಕಾಲೇಜಿನ ಪ್ರಾಚಾರ್ಯ ಶ್ರೀ ಆದರ್ಶ ಚೊಕ್ಕಾಡಿ ಉದ್ಘಾಟಿಸಿದರು. ಧ್ವಜಾರೋಹಣವನ್ನು ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕ ಇದರ ಮುಖ್ಯೋಪಾಧ್ಯಾಯ ರಮೇಶ್ ಯನ್. ನೆರವೇರಿಸಿದರು. ಅಧ್ಯಕ್ಷತೆಯನ್ನು ಡಾ| ಪ್ರಭಾಕರ ಭಟ್ ಕಲ್ಲಡ್ಕ ವಹಿಸಿದ್ದರು. ಉಪಸ್ಥಿತರಿದ್ದರು.

**ಯಶಸ್ ಪರೀಕ್ಷೆ: 25.12.2017**

ವಿವೇಕಾನಂದ ವಿದ್ಯಾವರ್ಧಕ ಸಂಘದ ನೇತೃತ್ವದಲ್ಲಿ ಬಂಟ್ವಾಳ ತಾಲೂಕು ವ್ಯಾಪ್ತಿಯ 10ನೇ ತರಗತಿ ವಿದ್ಯಾರ್ಥಿಗಳಿಗೆ ಯಶಸ್ ಪರೀಕ್ಷೆ ಶ್ರೀರಾಮ ಪದವಿ ವಿಭಾಗದಲ್ಲಿ ನಡೆಯಿತು. ಈ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸುಮಾರು 80 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು.

**ಅಂತರ ಕಾಲೇಜು ನಾಟಕ ಸ್ಪರ್ಧೆ 'ರಂಗಭೂಮಿಕಾ 2017' : 24-12-2017**



ಮಂಚಿ - ಕುಕ್ಕಾಜೆ ಬಿ.ವಿ ಕಾರಂತ ರಂಗಭೂಮಿಕಾ ಟ್ರಸ್ಟ್ ವತಿಯಿಂದ ನಡೆದ ಬಿ.ವಿ ಕಾರಂತರ ನೆನಪಿನ ಅಂತರ ಕಾಲೇಜು ನಾಟಕ ಸ್ಪರ್ಧೆ 'ರಂಗಭೂಮಿಕಾ 2017'ರಲ್ಲಿ ನಮ್ಮ ಕಾಲೇಜಿನಿಂದ ಒಟ್ಟು 25 ವಿದ್ಯಾರ್ಥಿಗಳ ತಂಡ ಭಾಗವಹಿಸಿ 'ಕುಣಿಕುಣಿ ನವಿಲೆ' ಎಂಬ ನಾಟಕವನ್ನು ಪ್ರದರ್ಶಿಸಿದರು.

**ಉದ್ಯೋಗ ಮಾರ್ಗದರ್ಶನ :26-12-2017**



ಶ್ರೀರಾಮ ಉದ್ಯೋಗ ಮಾಹಿತಿ ಕೇಂದ್ರ ಇದರ ವತಿಯಿಂದ ದಿನಾಂಕ 26-12-2017 ರಂದು ಆರ್ಟ್ ಆಫ್ ಲೀವಿಂಗ್ ಇದರ ಶಿಕ್ಷಕ ರಾಜಾ ರಾಮ್ ಐತಾಳ್ ಇವರು ವಿದ್ಯಾರ್ಥಿಗಳಿಗೆ ಉದ್ಯೋಗ ಮಾರ್ಗದರ್ಶನ ನೀಡಿದರು.

**ಸರಸ್ವತಿ ವಂದನಾ ವೀಕ್ಷಣೆ 28-12-2017:**

ಶ್ರೀ ಉಮಾಶಿವ ಕ್ಷೇತ್ರ ಗೇರುಕಟ್ಟೆ ಕಲ್ಲಡ್ಕದಲ್ಲಿ ಶ್ರೀ ಭಾರತಿ ಕಾಲೇಜು ಮಂಗಳೂರು ಇಲ್ಲಿನ ಎನ್.ಎಸ್.ಎಸ್ ವಿದ್ಯಾರ್ಥಿಗಳ ವಿಶೇಷ ಶಿಬಿರದ ಶಿಬಿರಾರ್ಥಿಗಳು ಶ್ರೀರಾಮ ವಿದ್ಯಾ-ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳನ್ನು ವೀಕ್ಷಣೆ ಮಾಡಿದರು. ಸಭಾವೇದಿಕೆಯಲ್ಲಿ ವಸುಧಾರಾ ಗೋಶಾಲೆಯ ಕಾರ್ಯದರ್ಶಿಗಳಾದ ರಾ-ಕೋಡಿ ಈಶ್ವರ ಭಟ್ ಮತ್ತು ಶ್ರೀ ಭಾರತಿ ಕಾಲೇಜಿನ ಕನ್ನಡ ಉಪನ್ಯಾಸಕಿ, ಎನ್.ಎಸ್. ಎಸ್‌ನ ಯೋಜನಾಧಿಕಾರಿ ಶ್ರೀ ಗಂಗಾರತ್ನ ಉಪಸ್ಥಿತರಿದ್ದರು.





ಪ್ರೌಢಶಾಲಾ ವಿಭಾಗ 902 ವಿದ್ಯಾರ್ಥಿಗಳಿಂದ ವ್ಯಕ್ತಿ ಬೇರೆ ಬೇರೆಯಾದರೂ ಭಾವ ಒಂದೇ ಎಂಬ ಸಂದೇಶ ಸಾರುವ ಸಾಮೂಹಿಕ ಪ್ರದರ್ಶನ. ಜೊತೆಗೆ ಶಿವಾಜಿ, ಝಾನ್ಸಿ ರಾಣಿ, ಹಾಗೂ ವೀರ ಸಾವರ್ಕರರ ಜೀವನ ಸಂದೇಶಗಳನ್ನು ನೆನಪಿಸುವ ಮತ್ತು ದೇಶದ ಮಹೋನ್ನತ ಸಾಧನೆಯ ಚಿತ್ರಣವನ್ನು ನೀಡಿ ಸೇರಿದ್ದ ಸಭಿಕರನ್ನು ಭಾವುಕರನ್ನಾಗಿಸಿದ ರೋಮಾಂಚಕಾರಿ ಘಟನೆಗಳೊಂದಿಗೆ ಕ್ರೀಡೋತ್ಸವ ಸಂಪನ್ನಗೊಂಡಿತು.





19/12/17 ರಿಂದ 22/12/17 ರವರೆಗೆ ಕನ್ಯಾಕುಮಾರಿ, ತಿರುವನಂತಪುರಂ, ಕೂಡಂಕುಲಂನ ಅಣುಸ್ಥಾವರಕ್ಕೆ ದ್ವಿತೀಯ ಹಂತದ ಶೈಕ್ಷಣಿಕ ಪ್ರವಾಸವನ್ನು ಪದವಿ ಪೂರ್ವ ವಿಭಾಗದಿಂದ ಕೈಗೊಳ್ಳಲಾಯಿತು.




ಸಭಿಕರೆಲ್ಲರ ಗಮನ ಸೆಳೆದ
ಕೂಪಿಕಾ ಪ್ರದರ್ಶನ

**Postal Regn No. PTR/135/2016-18** **Licensed to Post without pre-payment** **License No: SK/WPP/PTR/177/2016-18**

ಸರಯೂ

**Vol. : 4** **Issue : 8** **Rs. 10/-**

**KARKAN/2014/62363**
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Ph.: 08255-275273 / 275183 / 275073 / 275693 / 279673 / 200085 / 279479
Website : www.srvk.org E-mail : info@srvk.org

BOOK POST

ಸವಿಧೇ,

___

___

___

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 08255-275 273. Printed at Anagha Digital Square, Kaikamba, B.C. Road - 574 219, Bantwal Tq., Dakshina Kannada, Karnataka. Registration No. : KARKAN/2014/62363